ಎನ್ನುವ ಸ್ಥಿತಿ ಇಂದು ಸ್ವಲ್ಪ ಮಟ್ಟಿಗಿದೆ. ನನ್ನ ಗೆಳೆಯರು ಬರೆದದ್ದನ್ನು ನಾನು ಓದ್ತೇನೆ, ಇತರರು ಮುಖ್ಯವಲ್ಲ ಎಂದರೆ ಏನು ಮಾಡುವುದು?''

ಎಚ್‌ಎಸ್‌ಆರ್ ಆತಂಕದ ಹಿನ್ನೆಲೆಯಲ್ಲಿ ದಿವಾಕರ್ ಅವರಿಗೆ ಹೊಳೆದದ್ದು ತರಬೇತಿ ಅಥವಾ ಸಿದ್ಧತೆಯ ಕೊರತೆ. ''ಅಮೆರಿಕದಲ್ಲಿನ ಬಹುತೇಕ ವಿವಿಗಳಲ್ಲಿ ಸೃಜನಶೀಲ ಬರವಣಿಗೆ ಕುರಿತ ಕೋರ್ಸ್‌ಗಳಿವೆ. ಅಲ್ಲಿನ ಕೋರ್ಸ್‌ಗಳಿಂದ ಬಹಳಷ್ಟು ವಿಮರ್ಶಕರು ಹುಟ್ಟಿಕೊಂಡಿದ್ದಾರೆ. ಓದನ್ನು ರೂಪಿಸುವ ಕೆಲಸ ನಡೆಯುತ್ತದೆ. ಕೃತಿಯೊಂದನ್ನು ಹೇಗೆ ಪ್ರವೇಶಿಸಬೇಕು ಎನ್ನುವುದನ್ನು ಅಕಡೆಮಿಕ್ ಆಗಿ ಹೇಳಿಕೊಡಲಾಗುತ್ತದೆ. ಆ ರೀತಿಯ ಕೆಲಸ ನಮ್ಮಲ್ಲೂ ಆಗಬೇಕಿದೆ'' ಎಂದರು.

ವಿಮರ್ಶೆಯ ಸ್ಥಿತಿಗತಿಯ ಬಗ್ಗೆ ದಿವಾಕರ್ ಮತ್ತೆ ಮಾತು ಬೆಳೆಸಿದರು. ''ಇವತ್ತಿನ ಕನ್ನಡದ ವಿಮರ್ಶೆ ಯಾವ ಸ್ಥಿತಿಯಲ್ಲಿದೆ? ಹೇಗಿರಬೇಕಿತ್ತು?'' ಎನ್ನುವುದು ಅವರ ಪ್ರಶ್ನೆ.

''ಸ್ಕಾಲರ್‌ಷಿಪ್ ಎನ್ನುವ ಪದ ನೀರಾಗುತ್ತ ನೀರಾಗುತ್ತಾ ಹೋಗುತ್ತಿದೆ. ವಿಮರ್ಶೆಗೆ ವಿದ್ವತ್ ಬೇಕಾಗಿಲ್ಲ ಎನ್ನುವ ಸ್ಥಿತಿಯಿದೆ. ಸ್ಕಾಲರ್‌ಷಿಪ್ ಬೇರೆ, ಬುದ್ಧಿವಂತಿಕೆ ಬೇರೆ. ನಮಗೆ ಅಭಿಪ್ರಾಯಗಳಿವೆಯೇ ಹೊರತು ಅದನ್ನು ಸಮರ್ಥಿಸಿಕೊಳ್ಳಲು ಬೇಕಾದ ವಿದ್ವತ್ತಿನ ಕೊರತೆ ಎದುರಿಸುತ್ತಿದ್ದೇವೆ. ಸಮುದಾಯಗಳಲ್ಲಿ ಒಂದು ಬಗೆಯ ಬೌದ್ಧಿಕತೆಯ ವಿರೋಧಿ ಮನೋಧರ್ಮ ಹೆಚ್ಚುತ್ತಿದೆ. ಬೌದ್ಧಿಕತೆಯನ್ನು ಸ್ವೀಕರಿಸುವಂತಹ ಮನೋಧರ್ಮವನ್ನು ಶಿಕ್ಷಣ ರೂಪಿಸುತ್ತಿಲ್ಲ. ಸಾಹಿತ್ಯದ ಓದುಗರೆಲ್ಲ ವಿಮರ್ಶೆಯ ಓದುಗರಾಗಬೇಕಿಲ್ಲ ಎನ್ನುವುದು ನಿಜ. ಆದರೆ, ವಿಮರ್ಶೆಯನ್ನು ಓದಬೇಕೆಂದು ನಾವು ನಿರೀಕ್ಷಿಸುವವರು ಕೂಡ ಬೌದ್ಧಿಕ ವಿರೋಧಿ ನಿಲುವನ್ನು ಬೆಳೆಸಿಕೊಂಡರೆ ಹೇಗೆ?'' ಎಂದರು ಎಚ್‌ಎಸ್‌ಆರ್.

''ತಂತ್ರಜ್ಞಾನ ಬದಲಾದಂತೆ ಮನುಷ್ಯ ಸಂಬಂಧದಲ್ಲೂ ಬದಲಾವಣೆ ಆಗಿದೆಯಾ? ಭಾವನೆಗಳ ಸ್ವರೂಪದಲ್ಲೂ ತಂತ್ರಜ್ಞಾನ ಬದಲಾವಣೆ ತರಬಲ್ಲದಾ?'' ಎನ್ನುವ ಪ್ರಶ್ನೆಗೆ ದಿವಾಕರ್ ಎದುರಿಗಿಟ್ಟಿದ್ದು ಪ್ರಶ್ನೆಗಳನ್ನೇ. ''ಯಾವುದನ್ನು ಮೌಲ್ಯ ಎಂದು ಕರೆಯುತ್ತಿದೆವೋ ಅದು ಅಪಮೌಲ್ಯವಾಗಿದೆ. ಅಪಮೌಲ್ಯ ಮೌಲ್ಯವಾಗುತ್ತಿದೆ. ನಾವು ಹೈಸ್ಕೂಲ್‌ನಲ್ಲಿದ್ದಾಗ ಬೇಲೂರು ಶ್ರೀನಿವಾಸ್ ಅಯ್ಯಂಗಾರ್ ಪ್ರಕರಣ ಎಂಟ್ಹತ್ತು ದಿನ ನಮ್ಮನ್ನು ಕಾಡಿತ್ತು. ಅವರ ಇಡೀ ಕುಟುಂಬದ ಹತ್ಯೆಯಾಗಿತ್ತು. ಈಗ ಅಂತಹ ಘಟನೆಗಳು ನಮ್ಮನ್ನು ಕ್ಷೋಭೆಗೆ ಈಡುಮಾಡುತ್ತಿಲ್ಲ. ನಮ್ಮ ಸಂವೇದನೆಗಳು ಏಕೆ ಮೊಂಡಾಗಿವೆ? ಜೀವನದ ಪ್ರತಿ ಹಂತದಲ್ಲೂ ಭ್ರಷ್ಟಾಚಾರ ಇದೆ ಹಾಗೂ ಅದು ನ್ಯಾಯಬದ್ಧವಾದುದು ಎನ್ನುವ ಸ್ವರೂಪ ಪಡೆಯುತ್ತಿದೆ. ಇದನ್ನು ಹೇಗೆ ನೋಡುವುದು? ಜೈಲಿಗೆ ಹೋಗಿ ಬಂದವರಿಗೆ ದೊರೆಯುತ್ತಿರುವ ಸ್ವಾಗತಕ್ಕೆ ಏನರ್ಥ?'' ಮಾತಿನ ಕೊನೆಗೆ ದಿವಾಕರ್ ಹೇಳಿದ್ದು – ''ಇದೆಲ್ಲವನ್ನೂ ಹಿಡಿಯಲು ನಮ್ಮ ಸಾಹಿತ್ಯಕ್ಕೆ ಆಗುತ್ತಿಲ್ಲ''.

''ಇದು ಕಾಲದ ಕುರಿತ ನಮ್ಮ ಹಳಹಳಿಕೆಯೂ ಇರಬಹುದು. ಮೊದಲು ಇದೆಲ್ಲ ಆಗುತ್ತಿರಲಿಲ್ಲವಾ? ಈಗ ಅಪರಾಧ–ಅನ್ಯಾಯಕ್ಕೆ ವಿಜಿಬಲಿಟಿ ಬಂದಿದೆ. ಅಸ್ಪೃಶ್ಯತೆ ಇದೆಯಲ್ಲ, ಅದು ಹಿಂದಿಗಿಂತಲೂ ಈಗ ಹೆಚ್ಚಾಗಿದೆ ಎಂದು ಹೇಳಲಾಗುವುದಿಲ್ಲ. ಈಗ ಮೌನವನ್ನು ಬಿಟ್ಟು ಪ್ರತಿಭಟನೆಗೆ ಬೇರೆ ದಾರಿಗಳು ಇರುವುದರಿಂದ ಆ ಘಟನೆಗಳಿಗೆ ವಿಜಿಬಲಿಟಿ ಬರುತ್ತೆ. ಆದರೆ, ಒಂದು ಘಟನೆ ನಮ್ಮ ಮನಸ್ಸನ್ನು ಎಷ್ಟರಮಟ್ಟಿಗೆ ತಲ್ಲಣಗೊಳಿಸಬೇಕಿತ್ತೋ ಆ ಮಟ್ಟಿಗೆ ತಾಕುತ್ತಿಲ್ಲ ಎನ್ನುವುದು ನಿಜ'' ಎಂದು ಎಚ್‌ಎಸ್‌ಆರ್ ಒಪ್ಪಿಕೊಂಡರು.

**(ಈ ಸಂವಾದ ಸುದೀರ್ಘ ಮಾತುಕತೆಯ ಆಯ್ದ ಭಾಗ)**

**ನಿರೂಪಣೆ: ರಘುನಾಥ ಚ.ಹ.**